# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **375** |
| ಉತ್ತರಿಸಬೇಕಾದ ದಿನಾಂಕ | : | 10.12.2025 |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಕರ್ನಾಟಕ ಗೃಹ ಮಂಡಳಿ ವ್ಯಾಪ್ತಿಯ ಸೂರ್ಯನಗರದ 1 ನೇ ಹಂತದಲ್ಲಿ ಹಂಚಿಕೆಯಾದ ಸೈಟ್‌ಗಳಿಗೆ ಆಗಸ್ಟ್ 2024 ರಿಂದ ಸ್ವತ್ತುಗಳು ಇ-ಖಾತಾ ಇಲ್ಲದೆ ನೋಂದಣಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಮತ್ತು ಯಾವ ಕಾಲಮಿತಿಯೊಳಗೆ ಇ-ಖಾತಾ ಮಾಡಲಾಗುವುದು ; (ಸಂಪೂರ್ಣ ಮಾಹಿತಿ ನೀಡುವುದು) | ಬಂದಿದೆ.<br><br>ಕರ್ನಾಟಕ ಗೃಹ ಮಂಡಳಿ ಕಾಯ್ದೆ ಕಲಂ 32(ಎ) ರನ್ವಯ ಗೃಹ ಮಂಡಳಿಯು ಬಡಾವಣೆ ಅಭಿವೃದ್ಧಿಪಡಿಸಿದ ನಂತರ ಬಡಾವಣೆಗಳನ್ನು ಮುಂದಿನ ನಿರ್ವಹಣೆಗಾಗಿ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಬೇಕಾಗಿರುತ್ತದೆ.<br><br>ಸೂರ್ಯನಗರ 1ನೇ ಹಂತ ಬಡಾವಣೆಯು ಚಂದಾಪುರ ಹಾಗೂ ಬೊಮ್ಮಸಂದ್ರ ಪುರಸಭೆಗಳ ವ್ಯಾಪ್ತಿಗೆ ಬರುತ್ತದೆ. ಕರ್ನಾಟಕ ಗೃಹ ಮಂಡಳಿ ಬಡಾವಣೆಯನ್ನು ನಿರ್ವಹಣೆಗಾಗಿ ಹಸ್ತಾಂತರ ಮಾಡಿಕೊಳ್ಳುವಂತೆ ಚಂದಾಪುರ ಹಾಗೂ ಬೊಮ್ಮಸಂದ್ರ ಪುರಸಭೆಗಳಿಗೆ ಸಾಕಷ್ಟು ಬಾರಿ ಮಂಡಳಿಯಿಂದ ಪತ್ರ ವ್ಯವಹಾರ ಮಾಡಲಾಗಿದೆ.<br><br>ಚಂದಾಪುರ ಮತ್ತು ಬೊಮ್ಮಸಂದ್ರ ಪುರಸಭೆಗಳು ಸೂರ್ಯನಗರ 1ನೇ ಹಂತ ಬಡಾವಣೆಯನ್ನು ಹಸ್ತಾಂತರ ಮಾಡಿಕೊಂಡು ಬಡಾವಣೆಯ ಸ್ವತ್ತುಗಳಿಗೆ ಇ-ಖಾತಾವನ್ನು ಮಾಡಿಕೊಡಲು ಕ್ರಮ ವಹಿಸಬೇಕಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಕಂಇ 20 ಎಂಎನ್‌ಎಂಯು 2023, ದಿನಾಂಕ:08.10.2024 ರಲ್ಲಿ ಕರ್ನಾಟಕ ಗೃಹ ಮಂಡಳಿ ಬಡಾವಣೆಯ ಸ್ವತ್ತುಗಳಿಗೆ ಮಂಡಳಿಯಿಂದಲೇ ಇ-ಖಾತಾ ನೀಡಲು ಸರ್ಕಾರದ ಆದೇಶವಾಗಿದ್ದು ಅದರಂತೆ 01 ತಿಂಗಳೊಳಗೆ ಇ-ಖಾತಾ ನೀಡಲು ಕ್ರಮಕೈಗೊಳ್ಳಲಾಗುವುದು. |
| ಆ) | ಗೃಹ ಮಂಡಳಿಯ ಸೂರ್ಯನಗರದಲ್ಲಿ ಹಂಚಿಕೆಯಾದ ನಿವೇಶನ ಮತ್ತು ಮನೆಗಳ ಬಗ್ಗೆ ಅಲ್ಲಿನ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತ್ವರಿತಗತಿಯಲ್ಲಿ ಕಾರ್ಯನಿರ್ವಹಿಸಲು ಕರ್ನಾಟಕ ಗೃಹ ಮಂಡಳಿ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಕ್ರಮ ಕೈಗೊಳ್ಳುವುದೇ ; | ಸೂರ್ಯನಗರ 1ನೇ ಹಂತ ವಸತಿ ಬಡಾವಣೆಯನ್ನು ಚಂದಾಪುರ ಮತ್ತು ಬೊಮ್ಮಸಂದ್ರ ಪುರಸಭೆಗಳಿಗೆ ಹಸ್ತಾಂತರಿಸಲು ಕ್ರಮಕೈಗೊಳ್ಳಲಾಗಿದ್ದು, ಸ್ವತ್ತುಗಳ ವಿವರಗಳನ್ನು ಸಹ ಸಲ್ಲಿಸಲಾಗಿದೆ.<br><br>ಆದುದರಿಂದ ಸೂರ್ಯನಗರ 1 ನೇ ಹಂತದ ಬಡಾವಣೆಯನ್ನು ಹಸ್ತಾಂತರ ಮಾಡಿಕೊಂಡು ಬಡಾವಣೆಯ ಸ್ವತ್ತುಗಳಿಗೆ ಇ-ಖಾತಾ ಮಾಡಿಕೊಡಲು ಪುರಸಭೆ ವತಿಯಿಂದ ಕ್ರಮ ವಹಿಸಬೇಕಾಗಿದೆ. ಈ ವಿಷಯದಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಯಾವುದೇ ನಿರ್ಲಕ್ಷ ವಾಗಿರುವುದಿಲ್ಲ. |

| | | |
|---|---|---|
| ಇ) | ಗೃಹ ಮಂಡಳಿಯ ಸೂರ್ಯನಗರದ 1 ನೇ ಹಂತದ ನಿವೇಶನಗಳಿಗೆ ಸಂಬಂಧಪಟ್ಟಂತೆ ನೋಂದಣಿ ಮತ್ತು ಇ-ಖಾತಾ ನೀಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಮತ್ತು ಎಲ್ಲಾ ಕಂದಾಯ ಮತ್ತು ಇತರೆ ವೆಚ್ಚಗಳನ್ನು ಭರಿಸಿದ್ದರೂ ಸಹ ಮೂಲ ಸೌಲಭ್ಯದಿಂದ ಕುಂಠಿತವಾಗುತ್ತಿರಲು ಕಾರಣವೇನು ; ಇ-ಖಾತಾ ಮಾಡದೇ ಇರುವುದರಿಂದ ಸರ್ಕಾರಕ್ಕೆ ತಗುಲಿದ ನಷ್ಟ ಎಷ್ಟು ; ಮಾಡಿದ್ದಲ್ಲಿ, ಬರುವ ಆದಾಯ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು) | ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ-2 ತಂತ್ರಾಂಶದೊಂದಿಗೆ ಇ ಆಸ್ತಿ/ಇ-ಸ್ವತ್ತು/ULMS/ಸ್ವಂತ ತಂತ್ರಾಂಶವನ್ನು ಸಂಯೋಜನೆಗೊಳಿಸುವ ಕುರಿತು ಸರ್ಕಾರದ ಆದೇಶ ಸಂಖ್ಯೆ:ಕಂಇ 20 ಎಂಎನ್ಎಂಯು 2023, ದಿನಾಂಕ:08.10.2024 ರನ್ವಯ ಸೂರ್ಯನಗರ 1ನೇ ಹಂತದ ನಿವೇಶನಗಳಿಗೆ ಇ-ಖಾತಾ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಸೂರ್ಯನಗರ 1ನೇ ಹಂತದ ಬಡಾವಣೆಯಲ್ಲಿ ಡಾಂಬರೀಕೃತ ರಸ್ತೆಗಳು, ಮಳೆ ನೀರಿನ ಚರಂಡಿ, ಒಳಚರಂಡಿ ವ್ಯವಸ್ಥೆ, ಉದ್ಯಾನವನಗಳ ಅಭಿವೃದ್ಧಿ, ಕಾವೇರಿ ಕುಡಿಯುವ ನೀರಿನ ವ್ಯವಸ್ಥೆ ಒಳಗೊಂಡಂತೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.<br><br>ಕಂದಾಯ ಇಲಾಖೆಯ ಆದೇಶದ ದಿನಾಂಕ: 08.10.2024 ರನ್ವಯ ಇ-ಖಾತಾ ನೀಡಲು ಕ್ರಮ ಕೈಗೊಳ್ಳಲಾಗುತ್ತಿರುವುದರಿಂದ ಸರ್ಕಾರಕ್ಕೆ ಯಾವುದೇ ನಷ್ಟವಾಗಿರುವುದಿಲ್ಲ.<br><br>ಕರ್ನಾಟಕ ಗೃಹ ಮಂಡಳಿಯ ಕಾಯ್ದೆಯನ್ವಯ ಯಾವುದೇ ಲಾಭ ನಷ್ಟವಿಲ್ಲದೆ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ಬಡಾವಣೆಯ ನಿರ್ವಹಣೆಗೆ ತಗಲುವ ವೆಚ್ಚವನ್ನು ಮಾತ್ರ ಸ್ವತ್ತಿನ ಮಾಲೀಕರಿಂದ ತೆರಿಗೆ/ನಿರ್ವಹಣಾ ವೆಚ್ಚವಾಗಿ ಪಾವತಿಸಿಕೊಳ್ಳಲಾಗುವುದು. ಆದ್ದರಿಂದ ಯಾವುದೇ ಆದಾಯದ ಪ್ರಶ್ನೆ ಉದ್ಭವಿಸುವುದಿಲ್ಲ. |
| ಈ) | ಕಲಬುರಗಿ ನಗರದ ಹೈಕೋರ್ಟ್ ರಿಂಗ್ ರಸ್ತೆಗೆ ಹೊಂದಿಕೊಂಡಿರುವ ಅಕ್ಕಮಹಾದೇವಿ ಕಾಲೋನಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಿ ನಿವೇಶನ ಹಂಚಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಬಂದಿದೆ. |
| ಉ) | ಈ ಬಡಾವಣೆಯಲ್ಲಿ ಅನೇಕ ಖಾಲಿ ನಿವೇಶನ ಹಾಗೂ ಸಿ.ಎ ಸೈಟ್‌ಗಳಿದ್ದು, ಈ ಖಾಲಿ ನಿವೇಶನಗಳಲ್ಲಿ ಬೃಹದಾಕಾರವಾಗಿ ಗಿಡಗಂಟಿಗಳು ಬೆಳೆದಿದ್ದು, ಇದರಿಂದ ಅಲ್ಲಿ ಪ್ರಾಣಿಗಳ ಮತ್ತು ವಿಷಜಂತುಗಳ ವಾಸಸ್ಥಾನವಾಗಿದ್ದು, ಇದರಿಂದ ಬಡಾವಣೆಯ ನಿವಾಸಿಗಳಿಗೆ ತುಂಬಾ ತೊಂದರೆಯಾಗುತ್ತಿರುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; | ಸದರಿ ಬಡಾವಣೆಯಲ್ಲಿನ ಎಲ್ಲಾ ನಿವೇಶನಗಳನ್ನು ಮಂಡಳಿಯ ನಿಯಮಾನುಸಾರ ಹಂಚಿಕೆ ಮಾಡಲಾಗಿರುತ್ತದೆ. ಹಂಚಿಕೆಯಾಗದೇ ಬಾಕಿ ಉಳಿದಿರುವ 2 ನಿವೇಶನಗಳು ಮತ್ತು 3 ಸಿ.ಎ. ನಿವೇಶನಗಳನ್ನು ಸ್ವಚ್ಛ ಮಾಡಲು ಕ್ರಮ ವಹಿಸಲಾಗಿದೆ. ದಿನಾಂಕ:01-12-2011 ರಂದು ಸದರಿ ಬಡಾವಣೆಯನ್ನು ಮುಂದಿನ ನಿರ್ವಹಣೆಗಾಗಿ, ಮಹಾನಗರ ಪಾಲಿಕೆ, ಕಲಬುರಗಿ, ಇವರಿಗೆ ಹಸ್ತಾಂತರಿಸಲಾಗಿರುತ್ತದೆ. |

| | | |
|---|---|---|
| ಊ) | ಈ ನಿವೇಶನದಲ್ಲಿ ಬೆಳೆದ ಗಿಡಗಂಟಿಗಳನ್ನು ಸ್ವಚ್ಛಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ಮತ್ತು ಯಾವ ಪ್ರಾಧಿಕಾರದಿಂದ ಈ ಕಾರ್ಯನಿರ್ವಹಿಸಲಾಗುವುದು ; ಮತ್ತು ಯಾವ ಕಾಲಮಿತಿಯೊಳಗೆ ಸ್ವಚ್ಛ ಮಾಡಲಾಗುತ್ತದೆ? (ಸಂಪೂರ್ಣ ಮಾಹಿತಿ ನೀಡುವುದು) | ಸದರಿ ಬಡಾವಣೆಯಲ್ಲಿನ ಎಲ್ಲಾ ನಿವೇಶನಗಳನ್ನು ಈಗಾಗಲೇ ಮಂಡಳಿಯ ನಿಯಮಾನುಸಾರ ಹಂಚಿಕೆ ಮಾಡಿ ಕ್ರಯ ಪತ್ರಗಳನ್ನು ನೀಡಲಾಗಿರುತ್ತದೆ. ಆದ್ದರಿಂದ ಹಂಚಿಕೆಯಾಗಿರುವ ನಿವೇಶನಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು ಸಂಬಂಧಪಟ್ಟ ಹಂಚಿಕೆದಾರರ ಜವಾಬ್ದಾರಿಯಾಗಿರುತ್ತದೆ. ಬಡಾವಣೆಯನ್ನು ನಿರ್ವಹಣೆಗಾಗಿ 2011 ರಲ್ಲಿ ಮಹಾನಗರ ಪಾಲಿಕೆ, ಕಲಬುರಗಿ, ಇವರಿಗೆ ಹಸ್ತಾಂತರಿಸಲಾಗಿರುತ್ತದೆ. ಆಸ್ತಿ ತೆರಿಗೆಯನ್ನು ಮಹಾನಗರ ಪಾಲಿಕೆ ವತಿಯಿಂದ ವಸೂಲಿ ಮಾಡುತ್ತಿರುವುದರಿಂದ ಬಡಾವಣೆ ನಿರ್ವಹಣೆಯನ್ನು ಕಲಬುರಗಿ ಮಹಾನಗರ ಪಾಲಿಕೆಯಿಂದ ನಿರ್ವಹಿಸಬೇಕಾಗಿರುತ್ತದೆ. |

ಸಂಖ್ಯೆ :ವಇ 227 ಕೆಹೆಚ್‌ಬಿ 2025

**(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು